ಇಂದು ದಿಃ 22.11.2018 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಶ್ರೀ.ಪಿ ಎಂ ಆರ್ ವಕೀಲರಿಂದ 9 ನೇ ಪ್ರತಿವಾದಿಗಳ ಪರವಾಗಿ**.

ಮಾಧವರಾವ ರೇಗೆ ಮತ್ತು ಶಂಕರರಾವರ ರೇಗೆರವರು ಮಕ್ಕಳು 13 ನೇ ಪ್ರತಿವಾದಿಗೆ ಬರೆದುಕೊಟ್ಟ ಪಾವರ ಆಫ್ ಅಟಾರ್ನಿ ಈಗ ನನಗೆ ತೋರಿಸಿದ ನಿಡಿ–9 ಆಗಿದೆ. 1973 ರಿಂದ 2006 ರವರೆಗೆ ನಿಡಿ–9 ಪಾವರ ಆಫ್ ಅಟಾರ್ನಿ ಆಧಾರದಲ್ಲಿ 13 ನೇ ಪ್ರತಿವಾದಿಯೇ ಬಾಡಿಗೆಯನ್ನು ತೆಗೆದುಕೊಳ್ಳುತ್ತಿದ್ದರು ಎಂಬುದು ನನಗೆ ಗೊತ್ತಿಲ್ಲ. ಈಗ ನನಗೆ ತೋರಿಸಿದ ನಿಡಿ–9 ಪಾವರ ಆಫ್ ಅಟಾರ್ನಿಯ ಕ್ಲಾಸ್ ನಂ.6 ರ ಪ್ರಕಾರ 13 ನೇ ಪ್ರತಿವಾದಿಯೇ ಬಾಡಿಗೆದಾರರು ಬಾಡಿಗೆ ಹಣವನ್ನು ನಿಗದಿ ಪಡಿಸುವುದು , ಬಾಡಿಗೆದಾರರಿಗೆ ಬಾಡಿಗೆ ಕೊಡವುದು , ಬಾಡಿಗೆ ಹಣವನ್ನು ಸ್ವೀಕರಿಸುವುದು ಆಗಿದೆ. ನಿಡಿ–9 ಪಾವರ ಆಫ್ ಅಟಾರ್ನಿಯಲ್ಲಿ ಎಲ್ಲ ಶರತ್ತುಗಳ ಬಗ್ಗೆ ನನ್ನದೇನು ತಕರಾರು ಇರಲ್ಲ. 1973 ರಿಂದ 2006 ರವೆರೆಗೆ ಹಾಗೂ ತೀರಿಹೋಗುವವರೆಗೆ 13 ನೇ ಪ್ರತಿವಾದಿಯು ನಿಡಿ–9 ಪಾವರ ಆಫ್ ಅಟಾರ್ನಿಯಲ್ಲಿ ಕಾಣಿಸಿರುವ ಶರತ್ತಿನ ಮೇರೆಗೆ ತಾನು ಸ್ವೀಕರಿಸಿದ ಬಾಡಿಗೆ ಹಣದ ಬಗ್ಗೆ ಲೆಕ್ಕವನ್ನು

ಕೊಟ್ಟಿರುವುದಿಲ್ಲ ಹಾಗೂ ಸದರಿ ಬಾಡಿಗೆ ಹಣವನ್ನು ಯಾರಿಗೂ ಕೊಟ್ಟಿರುವುದಿಲ್ಲ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಆ ರೀತಿ ಬಾಡಿಗೆ ಹಣ ತನಗೆ ಬಂದಿಲ್ಲ ಎಂದು ಉತ್ತರಿಸಿದ್ದಾರೆ. 13 ನೇ ಪ್ರತಿವಾದಿಯು ಆ ರೀತಿ ಸ್ವೀಕರಿಸಿದ ಬಾಡಿಗೆ ಹಣವನ್ನು ಕುಟುಂಬದ ಖರ್ಚಿಗೆ ಸಹ ವೆಚ್ಚ ಮಾಡಿಲ್ಲ ಎಂಬುದು ನನಗೆ ಗೊತ್ತಿಲ್ಲ. 13 ನೇ ಪ್ರತಿವಾದಿಯು ಆ ರೀತಿ ಸ್ವೀಕರಿಸಿದ ಬಾಡಿಗೆ ಹಣವನ್ನು ನನಗೆ , 14 ಮತ್ತು 18 ಪ್ರತಿವಾದಿಗಳಿಗೆ ಕೊಟ್ಟಿದ್ದಾರೆ , ಆ ಹಣದಿಂದ ನಾವೆಲ್ಲರೂ ಸ್ವತ್ತುಗಳನ್ನು ಖರೀದಿಸಿದ್ದೇವೆ ಎಂದು ಹೇಳುವುದು ಸರಿಯಲ್ಲ. ಸದರಿ ಹಣದಿಂದ ನಾವು ಸ್ವತ್ತುಗಳನ್ನು ಖರೀದಿಸಿದ್ದರೂ ಖರೀದಿಸಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದು ಹೇಳುವುದು ಸರಿಯಲ್ಲ. ನನ್ನ ಹೆಸರಿನಲ್ಲಿ ಮಹಾರಾಷ್ಟ್ರದ ರಾಯಗಢ ಜಿಲ್ಲೆ ಪನ್ವೆಲ್ ನಲ್ಲಿ ಅಪಾರ್ಟಮೆಂಟನಲ್ಲಿ ಫ್ಲಾಟ್ ಇದೆ , ಅದು ಈಗಲೂ ನಿಮ್ಮ ಹೆಸರಿನಲ್ಲಿಯೇ ಇದೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಮೊದಲು ಇತ್ತು , ಈಗ ಅದನ್ನು ಮಾರಾಟ ಮಾಡಿದ್ದೇನೆ ಎಂದು ಉತ್ತರಿಸಿದ್ದಾರೆ. ಸದರಿ ಫ್ಲಾಟನ್ನು ಖರೀದಿಸುವ ಸಮಯದಲ್ಲಿ ನನಗೆ 13 ನೇ ಪ್ರತಿವಾದಿಯು ಹಣದ ಸಹಾಯ ಮಾಡಿದ್ದರು ಎಂದು ಹೇಳುವುದು ಸರಿಯಲ್ಲ. ಸದರಿ ಫ್ಲಾಟನ್ನು ಮಾರಾಟ ಮಾಡಿ ಬಂದ ಹಣದಲ್ಲಿ ಈಗ ನಾನು ಬೆಳಗಾವಿಯಲ್ಲಿ ಫ್ಲಾಟನ್ನು ಖರೀದಿಸಿದ್ದೇನೆ. ಸದರಿ ಫ್ಲಾಟನ್ನು ಖರೀದಿಸಲು ಸಹ 13 ನೇ ಪ್ರತಿವಾದಿಯನ್ನು ಹಣದ ಸಹಾಯ ಮಾಡಿದ್ದರು ಎಂದು ಹೇಳುವುದು ಸರಿಯಲ್ಲ. 13 ನೇ ಪ್ರತಿವಾದಿಯು ಸದರಿ ಬಾಡಿಗೆ ಹಣದಲ್ಲಿ 13 ನೇ ಪ್ರತಿವಾದಿಗೆ ಹಣದ ಸಹಾಯ ಮಾಡಿದ ಕಾರಣ 14 ನೇ ಪ್ರತಿವಾದಿಯು ಧಾರವಾಡದ ವಿದ್ಯಾಗಿರಿಯಲ್ಲಿ ಎರೆಡು ನಿವೇಶನಗಳನ್ನು ಖರೀದಿಸಿದ್ದಾರೆ ಎಂಬುದು ನನಗೆ ಗೊತ್ತಿಲ್ಲ. ಸದರಿ ವಿಷಯ ನನಗೆ ಗೊತ್ತಿದ್ದರೂ ಸಹ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದು ಹೇಳುವುದು ಸರಿಯಲ್ಲ. 18 ನೇ ಪ್ರತಿವಾದಿಯು ಉಡುಪಿಯಲ್ಲಿ ಮನೆ ಕಟ್ಟುವ ಸಮಯದಲ್ಲಿ ಹಾಗೂ ಮಣಿಪಾಲನಲ್ಲಿ ಮನೆ ಖರೀದಿಸುವ ಸಮಯದಲ್ಲಿ ಸಹ 13 ನೇ ಪ್ರತಿವಾದಿಯು ತಾನು ಸಂಗ್ರಹಿಸಿದ ಬಾಡಿಗೆ ಹಣದಲ್ಲಿ ಅವರಿಗೆ ಹಣ ಕೊಟ್ಟು ಸಹಾಯ ಮಾಡಿದ್ದಾರೆ ಎಂಬುದು ನನಗೆ ಗೊತ್ತಿಲ್ಲ. 13, 14 ಮತ್ತು 18 ನೇ ಪ್ರತಿವಾದಿಗಳು ನನ್ನ ಸ್ವತಂ ಅಣ್ಣತಮ್ಮಂದಿರಾದ ಕಾರಣ , ಅವರು 13

ನೇ ಪ್ರತಿವಾದಿಯಿಂದ ಸಂಗ್ರಹಿಸಿದ ಬಾಡಿಗೆ ಹಣದ ಸಹಾಯ ಪಡೆದು ಸ್ವತ್ತುಗಳನ್ನು ಖರೀದಿಸಿದ್ದರೂ ಸದರಿ ವಿಷಯ ನನಗೆ ಗೊತ್ತಿದ್ದರೂ ಸಹ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದು ಹೇಳುವುದು ಸರಿಯಲ್ಲ. 13 ನೇ ಪ್ರತಿವಾದಿಗೆ ಮಕ್ಕಳು ಇಲ್ಲ. 13 ನೇ ಪ್ರತಿವಾದಿಯು ಸದರಿ ಬಾಡಿಗೆ ಹಣದಲ್ಲಿ 14 ನೇ ಪ್ರತಿವಾದಿ ಹೆಸರಿನಲ್ಲಿ ಶೇರುಗಳನ್ನು ಖರೀದಿಸಿದ್ದರು ಹಾಗೂ ಡೆಪಾಸಿಟ್ ಮಾಡಿದ್ದರು ಎಂಬುದು ನನಗೆ ಗೊತ್ತಿಲ್ಲ. 13 ನೇ ಪ್ರತಿವಾದಿಯ ಹೆಸರಿನಲ್ಲಿ ಕಾರ್ಪೊರೇಶನ್ ಬ್ಯಾಂಕ ಧಾರವಾಡದಲ್ಲಿ ಉಳಿತಾಯ ಖಾತೆ ಹಾಗೂ ಎಫ್ ಡಿ ಗಳು ಇದ್ದವು ಎಂಬುದು ನನಗೆ ಗೊತ್ತಿಲ್ಲ. ಸದರಿ ಉಳಿತಾಯ ಖಾತೆ ಹಾಗೂ ಎಫ್ ಡಿ ಗಳು ಮೊದಲು ಧಾರವಾಡದ ಕೆನರಾ ಬ್ಯಾಂಕಿನಲ್ಲಿ ಇದ್ದವು , 13 ನೇ ಪ್ರತಿವಾದಿಯು ಸದರಿ ಬ್ಯಾಂಕ ಮ್ಯಾನೇಜರ್ ಜೊತೆ ಜಗಳವಾದ ಕಾರಣ ಅವುಗಳನ್ನು ಕಾರ್ಪೊರೇಶನ್ ಬ್ಯಾಂಕ ಧಾರವಾಡಕ್ಕೆ ವರ್ಗಾಯಿಸಿಕೊಂಡಿದ್ದರು ಎಂಬುದು ನನಗೆ ಗೊತ್ತಿಲ್ಲ. 13 ನೇ ಪ್ರತಿವಾದಿಯ ಹೆಸರಿನಲ್ಲಿರುವ ಬ್ಯಾಂಕ ಖಾತೆಗಳ ಬಗ್ಗೆ ಸದರಿ ಬ್ಯಾಂಕಗಳನ್ನು ಈ ದಾವೆಯಲ್ಲಿ ಪಾರ್ಟಿದಾರರನ್ನಾಗಿ ಮಾಡಿರುವುದಿಲ್ಲ. 13 ನೇ ಪ್ರತಿವಾದಿಯು ನನಗೆ ಖಾಸ ಅಣ್ಣ ಆಗಿದ್ದುದರಿಂದ , ಅವರಿಂದ ನನಗೆ ಅವರು ಸಂಗ್ರಹಿಸಿದ ಬಾಡಿಗೆ ಹಣದಿಂದ ಸಹಾಯ ಪಡೆದುಕೊಂಡಿದ್ದುದರಿಂದ 13 ನೇ ಪ್ರತಿವಾದಿಯ ಖಾತೆಗಳಿರುವ ಬ್ಯಾಂಕಗಳನ್ನು ಈ ದಾವೆಯಲ್ಲಿ ಪಾರ್ಟಿದಾರರನ್ನಾಗಿ ಮಾಡಿರುವುದಿಲ್ಲ ಎಂದು ಹೇಳುವುದು ಸರಿಯಲ್ಲ. 13 ನೇ ಪ್ರತಿವಾದಿಯು ತಾನು ಸಂಗ್ರಹಿಸಿದ ಬಾಡಿಗೆ ಹಣವನ್ನು ಧಾರವಾಡದ ಸಿಂಡಿಕೇಟ್ ಬ್ಯಾಂಕ , ರತ್ನಾಕರ್ ಬ್ಯಾಂಕ, ಮಹಾರಾಷ್ಟರ ಅಪೆಕ್ಸ ಬ್ಯಾಂಕ ಮತ್ತು ಮಹಾಲಕ್ಷ್ಮೀ ಕೋ ಅಪರೇಟಿವ ಬ್ಯಾಂಕಗಳಲ್ಲಿ ಇಟ್ಟಿದ್ದರು ಎಂಬುದು ನನಗೆ ಗೊತ್ತಿಲ್ಲ. 2015 ರಲ್ಲಿ 13 ನೇ ಪ್ರತಿವಾದಿ ತೀರಿಕೊಂಡರು. ಅವರು ತೀರಿಹೋಗುವ 2 ದಿನಗಳ ಮೊದಲು ಅವರು ಹಾಸಿಗೆ ಹಿಡಿದ ಸಮಯದಲ್ಲಿ ನಾನು ಮತ್ತು 14(ಸಿ) ಪ್ರತಿವಾದಿ ಸೇರಿ ಸಬ್ ರಜಿಸ್ಟ್ರಾರರವನ್ನು ಮನೆಗೆ ಕರೆದುಕೊಂಡು ಬಂದು ನೋಂದಾಯಿತ ಮೃತ್ಯುಪತ್ರವನ್ನು ಬರೆಯಿಸಿಕೊಂಡಿದ್ದೇವೆ . ಸದರಿ ಸೃಷ್ಟಿಸಿದ ಮೃತ್ಯುಪತ್ರವನ್ನು ಮಾಡಿದ ಎರೆಡು ದಿನಗಳ ನಂತರ 13 ನೇ ಪ್ರತಿವಾದಿ ತೀರಿಕೊಂಡರು. ತೀರಿಹೋಗುವ 15 ದಿನ ಗಳ ಹಿಂದೆ

ಅವರು ಧಾರವಾಡದ ಎಸ್ ಡಿ ಎಂ ಆಸ್ಪತ್ರೆಯಲ್ಲಿ ಚಿಕಿತ್ಸೆಗಾಗಿ ದಾಖಲಾಗಿದ್ದರು ಎಂಬುದನ್ನು ನನಗೆ ಹೇಳಲಾಗುವುದಿಲ್ಲ. ಅವರು ತೀರಿಹೋಗುವ ಮೂರು ದಿನಗಳ ಮೊದಲು ಸದರಿ ಆಸ್ಪತ್ರೆಯ ವೈದ್ಯರು ಚಿಕಿತ್ಸೆ ಫಲಕಾರಿಯಾಗುವುದಿಲ್ಲ , ಮನೆಗೆ ಕರೆದುಕೊಂಡು ಹೋಗಿ ಎಂದು ಹೇಳಿದ್ದರೂ ಎಂಬುದು ನನಗೆ ಗೊತ್ತಿಲ್ಲ. ಎಸ್ ಡಿ ಎಂ ಆಸ್ಪತ್ರೆಯಿಂದ 13 ನೇ ಪ್ರತಿವಾದಿಯು ಬಿಡುಗಡೆಗೊಂಡು ತೀರಿಹೋಗುವವರೆಗೆ ಅವರಿಗೆ ಪ್ರಜ್ಞೆ ಇರಲಿಲ್ಲ ಎಂಬುದು ನನಗೆ ಗೊತ್ತಿಲ್ಲ. ಅವರು ತೀರಿಹೋಗುವ ಸಮಯದಲ್ಲಿ ಅವರ ಹೆಸರಿನಲ್ಲಿ ಸುಮಾರು 25-30 ಲಕ್ಷ ರೂ. ಬ್ಯಾಂಕ ಖಾತೆಗಳಲ್ಲಿ ಇತ್ತು , ಅದನ್ನು ಮೃತ್ಯುಪತ್ರದಲ್ಲಿ ಕಾಣಿಸಲಾಗಿದೆ ಎಂಬುದು ನನ್ನ ಗಮನಕ್ಕೆ ಇಲ್ಲ . ಸದರಿ ಮೃತ್ಯುಪತ್ರಕ್ಕೆ ನಾನು ಸಾಕ್ಷಿದಾರನಾಗಿ ಸಹಿ ಮಾಡಿದ್ದೇನೆ. ಅವರು ತೀರಿಹೋದ ನಂತರ ಮೃತ್ಯುಪತ್ರವನ್ನು ಆಧರಿಸಿ ನಾನು ಮತ್ತು 14(ಸಿ) ಪ್ರತಿವಾದಿಯು ಸದರಿ ಠೇವಣಿ ಇಟ್ಟ ರೂ 25-30 ಲಕ್ಷ ಹಣವನ್ನು ನಾಮನಿರ್ದೇಶನ ಮಾಡಿ ಬೇರೆ ಬೇರೆಯವರ ಹೆಸರಿನಲ್ಲಿ ಎಫ್.ಡಿ ಮಾಡಿಸಿದ್ದೇವೆ ಎಂದು ಹೇಳುವುದು ಸರಿಯಲ್ಲ. ಸದರಿ ಹಣ ಈಗ ಯಾರ ಹೆಸರಿನಲ್ಲಿದೆ ಎಂಬುದು ನನಗೆ ಗೊತ್ತಿಲ್ಲ. ನಾನು ಮತ್ತು 14(ಸಿ) ಪ್ರತಿವಾದಿ ಸೇರಿ ಸದರಿ ಹಣವನ್ನು 14(ಸಿ) ಪ್ರತಿವಾದಿಗೆ , 13(ಎ) ಪ್ರತಿವಾದಿ ಮತ್ತು 24 ನೇ ಪ್ರತಿವಾದಿಯ ಹೆಸರಿನಲ್ಲಿ ಡೆಪಾಸಿಟ್ ಮಾಡಿಸಿದ್ದೇವೆ ಎಂದು ಹೇಳುವುದು ಸರಿಯಲ್ಲ. ಸದರಿ ಎಲ್ಲ ವಿಚಾರಗಳು ನನಗೆ ಗೊತ್ತಿದ್ದರೂ , ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದು ಹೇಳುವುದು ಸರಿಯಲ್ಲ. 13 ನೇ ಪ್ರತಿವಾದಿಯ ಹುಟ್ಟಿದ ದಿನಾಂಕ ನನಗೆ ನಿಖರವಾಗಿ ಗೊತ್ತಿಲ್ಲ , ಅವರು 1933 ರಲ್ಲಿ ಜನಿಸಿದ್ದಾರೆ. ಅವರು 1966 ರಲ್ಲಿ ರೇಗೆ ಬ್ರದರ್ಸ ಜನರಲ್ ಮರ್ಚಂಟ ಶಾಪ್ ನಿಂದ ಸ್ವಲ್ಪ ಹಣವನ್ನು ತೆಗೆದುಕೊಂಡು ರೇಗೆ ಗ್ಲಾಸ್ ವೇರ್ ಎಂಬ ಶಾಪನ್ನು ಪ್ರಾರಂಭಸಿದರು ಎಂಬುದು ನನಗೆ ಗೊತ್ತಿಲ್ಲ. ಅವರು ಸದರಿ ಶಾಪನ್ನು ಪ್ರಾರಂಬಿಸುವ ಮೊದಲು ವಿದ್ಯಾಭ್ಯಾಸ ಮಾಡುತ್ತಿದ್ದರು ಎಂಬುದು ನನಗೆ ಗೊತ್ತಿಲ್ಲ. ದಾವಾ ಅನೆಕ್ಸರ್ ಬಿ ಸಿರಿಯಲ್ ನಂ.12 ಸ್ವತ್ತನ್ನು ಅವರು 1959 ರಲ್ಲಿ ತಮ್ಮ ಮಗನ ಹೆಸರಿನಲ್ಲಿ ಖರೀದಿಸಿದರು ಎಂಬುದು ನನಗೆ ಗೊತ್ತಿಲ್ಲ. ಸದರಿ ಸ್ವತ್ತನ್ನು ಅವರು ಮಾರುತಿ ಮೋಟಾರ್ಸ ನಿಂದ ಗಳಿಸಿದ ಹಣದಿಂದಲೇ ಖರೀದಿಸಿದ್ದು

ಎಂದು ಹೇಳುವುದು ಸರಿಯಲ್ಲ. 1959 ರಲ್ಲಿ 13 ನೇ ಪ್ರತಿವಾದಿಯು ಇನ್ನೂ ವಿದ್ಯಾಭ್ಯಾಸ ಮಾಡಿಕೊಂಡಿದ್ದ ಕಾರಣ ಅವರಿಗೆ ಯಾವುದೇ ಆದಾಯ ಇರಲಿಲ್ಲ ಎಂಬುದು ನನಗೆ ಗೊತ್ತಿಲ್ಲ. 1974 ರವೆರೆಗೆ ನಾನು ಧಾರವಾಡದಲ್ಲಿಯೇ ಇದ್ದೆ. ಮೇಲೆ ಹೇಳಿದ ಎಲ್ಲ ಸಂಗತಿಗಳು ನನಗೆ ಗೊತ್ತಿದ್ದರೂ ಸಹ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದು ಹೇಳುವುದು ಸರಿಯಲ್ಲ. ಸಿರಿಯಲ್ ನಂ.12 ಸ್ವತ್ತು ಮಾರುತಿ ಮೋಟಾರ್ಸ ಆದಾಯದಿಂದ ಗಳಿಸಿದ ಸ್ವತ್ತಾದ ಕಾರಣ ಮಾಧವರಾವರವರ ಕುಟುಂಬದವರಿಗೆ ಮಾತ್ರ ಸದರಿ ಸ್ವತ್ತಿನ ಮೇಲೆ ಹಕ್ಕು ಇದೆ , 13 ನೇ ಪ್ರತಿವಾದಿಗೆ ಹಾಗೂ ನಮಗೆ ಯಾವುದೇ ಹಕ್ಕು ಇರಲಿಲ್ಲ ಎಂದು ಹೇಳುವುದು ಸರಿಯಲ್ಲ. ರೇಗೆ ಗ್ಲಾಸ್ ವೇರ್ ಶಾಪನ್ನು 1 ನೇ ವಾದಿ ಮತ್ತು 13 ನೇ ಪ್ರತಿವಾದಿ ನಡೆಸುತ್ತಿದ್ದರು ಎಂಬುದು ನನಗೆ ಗೊತ್ತಿಲ್ಲ. ಸದರಿ ಸಂಗತಿಯನ್ನು ನಾನು ವಾದಪತ್ರದಲ್ಲಿ ಕಾಣಿಸಿದ್ದರೂ ಸಹ ಈಗ ಗೊತ್ತಿಲ್ಲ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದು ಹೇಳುವುದು ಸರಿಯಲ್ಲ. 13 ನೇ ಪ್ರತಿವಾದಿಯು ಮಾಡಿದ ಎಲ್ಲ ವ್ಯವಹಾರಗಳ ಬಗ್ಗೆ 1 ನೇ ವಾದಿಗೆ ಮಾಹಿತಿ ಇತ್ತು ಎಂಬುದು ನನಗೆ ಗೊತ್ತಿಲ್ಲ. 13 ನೇ ಪ್ರತಿವಾದಿಯು ತಾನು ಸಂಗ್ರಹಿಸಿದ ಬಾಡಿಗೆ ಹಣವನ್ನು ದುರುಪಯೋಗ ಪಡಿಸಿಕೊಂಡಿದ್ದಾರೆ ಎಂಬ ವಿಷಯ ನನಗೆ ಗೊತ್ತಿದ್ದರೂ ಸಹ ನಾವು ಈ ದಾವೆಯಲ್ಲಿ 9 ನೇ ಪ್ರತಿವಾದಿಯು 13 ನೇ ಪ್ರತಿವಾದಿಯೊಂದಿಗೆ ಸೇರಿ ಸದರಿ ಹಣವನ್ನು ದುರುಪಯೋಗ ಪಡಿಸಿಕೊಂಡಿದ್ದಾರೆ ಎಂದು ಸುಳ್ಳು ಆಪಾದನೆ ಮಾಡಿದ್ದೇನೆ ಎಂದು ಹೇಳುವುದು ಸರಿಯಲ್ಲ.

ವಾದಪತ್ರದ ಅನೆಕ್ಸರ್ ಸಿ ನಲ್ಲಿ ಕಾಣಿಸಿರುವ ಸ್ವತ್ತುಗಳ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರ ಪಡಿಸಿರುವುದಿಲ್ಲ. ಸದರಿ ಸ್ವತ್ತುಗಳನ್ನು ಮಾರಾಟ ಮಾಡಿದ್ದಾರೆ ಎಂದು ತೋರಿಸುವ ಬಗ್ಗೆ ಸಹ ಯಾವುದೇ ದಾಖಲೆಗಳನ್ನು ಹಾಜರ ಪಡಿಸಿರುವುದಿಲ್ಲ. ಸಿರಿಯಲ್ ನಂ.2 ಅನೆಕ್ಸರ್ ಸಿ ನಲ್ಲಿ ಕಾಣಿಸಿದ ಕಾರವನ್ನು 13 ನೇ ಪ್ರತಿವಾದಿಯೇ ಮಾರಾಟ ಮಾಡಿದ್ದಾರೆ ಎಂದು ಹೇಳುವುದು ಸರಿಯಲ್ಲ. ಅದರಲ್ಲಿ ಕಾಣಿಸಿದ ಯಾವುದೇ ಚರ ಸ್ವತ್ತುಗಳ ಅಸ್ತಿತ್ವದಲ್ಲಿ ಇರಲಿಲ್ಲ ಎಂದು ಹೇಳುವುದು ಸರಿಯಲ್ಲ. ಸಿರಿಯಲ್ ನಂ.3 ಅನೆಕ್ಸರ್ ಸಿ ನಲ್ಲಿ ಕಾಣಿಸಿದ ಸ್ವತ್ತನ್ನು 9 ನೇ ಪ್ರತಿವಾದಿಯು ಖರೀದಿಸಲು ಅವರಿಗೆ ಅವರ ಆದಾಯ

ಇತ್ತು ಎಂದು ಹೇಳುವುದು ಸರಿಯಲ್ಲ. ಅವರು ರೇಗೆ ಆಟೋ ಸರ್ವಿಸ್ ನಡೆಸುತ್ತಿದ್ದ ಕಾರಣ , ಅವರಿಗೆ ಸ್ವಂತ ಆದಾಯ ಇತ್ತು ಎಂದು ಹೇಳುವುದು ಸರಿಯಲ್ಲ. ಸದರಿ ಸ್ವತ್ತನ್ನು ಕುಟುಂಬದ ಆದಾಯದಿಂದ ಖರೀದಿಸಿದ್ದು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದು ಹೇಳುವುದು ಸರಿಯಲ್ಲ. ಯಾವ ಕುಟುಂಬದ ಆದಾಯ 9 ನೇ ಪ್ರತಿವಾದಿಗೆ ಹೋಗುತ್ತಿತ್ತು ಎಂಬುದನ್ನು ತೋರಿಸುವ ಬಗ್ಗೆ ದಾಖಲೆಗಳನ್ನು ಹಾಜರ ಪಡಿಸಿರುವುದಿಲ್ಲ. 2006 ರವೆರೆಗೆ ನಮ್ಮ ಕುಟುಂಬದ ಎಲ್ಲ ಆದಾಯ 13 ನೇ ಪ್ರತಿವಾದಿಗೆ ಹೋಗುತ್ತಿದ್ದ ಕಾರಣ , 9 ನೇ ಪ್ರತಿವಾದಿಯು ಕುಟುಂಬದ ಆದಾಯದಿಂದ ಸದರಿ ಸ್ವತ್ತನ್ನು ಖರೀದಿಸುವ ಪ್ರಮಯವೇ ಬಂದಿರಲಿಲ್ಲ ಎಂದು ಹೇಳುವುದು ಸರಿಯಲ್ಲ.

ಸಿರಿಯಲ್ ನಂ.4 ಅನೆಕ್ಸರ್ ಸಿ ಸ್ವತ್ತಿನ ವ್ಯವಹಾರದ ಬಗ್ಗೆ ನನಗೆ ಮಾಹಿತಿ ಇದೆ. ಸದರಿ ಸ್ವತ್ತಿನ ಒಟ್ಟು ಮೌಲ್ಯ ಸ್ಟ್ಯಾಂಪ ಡ್ಯುಟಿಯನ್ನು ಸೇರಿಸಿ ರೂ 14 ಲಕ್ಷ ಆಗಿತ್ತು. ಸದರಿ ವ್ಯವಹಾರ ಆಗುವ ಸಮಯದಲ್ಲಿ ನಾನು ಬಾಂಬೆಯಲ್ಲಿ ಇದ್ದೆ ಎಂದು ಹೇಳುವುದು ಸರಿಯಲ್ಲ. ಸದರಿ ವ್ಯವಹಾರ ನನ್ನ ಸಮಕ್ಷಮ ಆಗದೇ ಇದ್ದರೂ ಸಹ ನಾನು ಸದರಿ ವ್ಯವಹಾರದಲ್ಲಿ ಭಾಗವಹಿಸಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದು ಹೇಳುವುದು ಸರಿಯಲ್ಲ. ಕೆನರಾ ಬ್ಯಾಂಕಿನಿಂದ ರೂ 10 ಲಕ್ಷ ಸಾಲವನ್ನು ನಾನು ಮತ್ತು ಜಗದೀಶ ರೇಗೆ ತೆಗೆದುಕೊಂಡು , 2 ಲಕ್ಷ ರೂ ಹಣವನ್ನು ಕುಟುಂಬದಿಂದ ತೆಗೆದುಕೊಂಡು ಮತ್ತು ಮೊದಲೇ 2 ಲಕ್ಷ ರೂ ಮುಂಗಡ ಹಣ ಕೊಟ್ಟಿದ್ದು , ಒಟ್ಟು ರೂ 14 ಲಕ್ಷ ಹಣ ಕೊಟ್ಟು ಸದರಿ ಸ್ವತ್ತನ್ನು ಖರೀದಿಸಿದ್ದು. ಸದರಿ 2 ಲಕ್ಷ ಹಣವನ್ನು ಜಗದೀಶ ರೇಗೆರವರು ಕೊಟ್ಟದ್ದು. ಜಗದೀಶ ರೇಗೆರವರು ಕುಟುಂಬದ ಆದಾಯದಿಂದ ರೂ 2 ಲಕ್ಷ ಹಣವನ್ನು ಕೊಟ್ಟಿದ್ದರು ಎಂದು ತೋರಿಸುವ ಬಗ್ಗೆ ದಾಖಲೆಗಳನ್ನು ಹಾಜರ ಪಡಿಸಿರುವುದಿಲ್ಲ. ಆ ಸಮಯದಲ್ಲಿ ಜಗದೀಶ ರೇಗೆರವರಿಗೆ 62 ವರ್ಷ ವಯಸ್ಸಾಗಿತ್ತು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಇರಬಹುದು ಎಂದು ಉತ್ತರಿಸಿದ್ದಾರೆ. ರೇಗೆ ಆಟೋಸರ್ವಿಸ್ ನಿಂದ ಬಂದ ಆದಾಯ ದಿಂದ ಜಗದೀಶ ರೇಗೆರವರ ಬಳಿ ಹಣ ಇತ್ತು ಎಂದು ಹೇಳುವುದು ಸರಿಯಲ್ಲ. ಸಾಕ್ಷಿ ಸ್ವತಃ ಹೇಳುತ್ತಾರೆ ರೇಗೆ ಆಟೋ ಸರ್ವಿಸ್ ನಾರಾಯಣ ರೇಗೆ ರವರ ಪ್ರೋಪ್ರೈಟರಿ ಕನ್ಸರ್ನ ಆಗಿತ್ತು ಎಂದು. 1982 ರಲ್ಲಿ

ನಾರಾಯಣ ರೇಗೆರವರು ತೀರಿಕೊಂಡರು. ಅವರು ತೀರಿಹೋದ ನಂತರ ಜಗದೀಶ ರೇಗೆ ಮತ್ತು ಶಾಂತಾರಾಮ ರೇಗೆರವರು ನೋಡಿಕೊಳ್ಳುತ್ತಿದ್ದರು. ರೇಗೆ ಆಟೋ ಸರ್ವಿಸ್ ನಿಂದ ಅವರಿಬ್ಬರೂ ಸಾಕಷ್ಟು ಆದಾಯ ಬಂದಿತ್ತು ಎಂದು ಹೇಳುವುದು ಸರಿಯಲ್ಲ. ಸದರಿ ಸ್ವತ್ತನ್ನು ಖರೀದಿಸುವ ಸಮಯದಲ್ಲಿ ಜಗದೀಶ ರೇಗೆರವರಿಗೆ 60 ವರ್ಷ ವಯಸ್ಸಾಗಿದ್ದು , ಬ್ಯಾಂಕಿನವರು ಅವರಿಗೆ ಸಾಲ ಕೊಡದ ಕಾರಣ , ನಾನು ಸೇವೆಯಲ್ಲಿದ್ದುದರಿಂದ ಬ್ಯಾಂಕಿನವರು ನನಗೆ ಮತ್ತು ಅವರಿಗೆ ಸೇರಿಸಿ ಸದರಿ ಸಾಲವನ್ನು ಕೊಟ್ಟದ್ದು. ಆ ಕಾರಣದಿಂದ ಸದರಿ ಸ್ವತ್ತನ್ನು ನನ್ನ ಹೆಸರಿನಲ್ಲಿ ಸೇರಿಸಿ ಜಂಟಿಯಾಗಿ ಖರೀದಿಸಿದ್ದು. ಸದರಿ ಸ್ವತ್ತಿಗೆ ಸಂಬಂಧಪಟ್ಟಂತೆ ನಾನು ಅದರ ಮಾಲಿಕರಿಗೆ ಯಾವುದೇ ಹಣವನ್ನು ಕೊಟ್ಟಿರುವುದಿಲ್ಲ. ಸದರಿ ಸ್ವತ್ತಿಗೆ ಸಂಬಂಧಪಟ್ಟಂತೆ ಮುನ್ಸಿಪಾಲಿಟಿಯಲ್ಲಿ ರೂ 58 ಸಾವಿರ ತೆರಿಗೆ ಬಾಕಿ ಇದ್ದು , ಅದನ್ನು ಜಗದೀಶ ರೇಗೆರವರೇ ಪಾವತಿ ಮಾಡಿದ್ದರು. ಸದರಿ ಸ್ವತ್ತಿನಲ್ಲಿ ಸುಮಾರು 150 ವರ್ಷ ಹಳೆಯ ಮನೆ ಇತ್ತು ಎಂಬುದು ನನಗೆ ಗೊತ್ತಿಲ್ಲ. ಸದರಿ ಸ್ವತ್ತಿನ ಚಕಬಂದಿ ನನಗೆ ಹೇಳಲಾಗುವುದಿಲ್ಲ. ಸದರಿ ಮನೆಯನ್ನು ರಿಪೇರಿ ಮಾಡಲು ಸುಮಾರು 8-10 ಲಕ್ಷ ರೂ ಹಣವನ್ನು ಜಗದೀಶ ರೇಗೆರವರು ಖರ್ಚು ಮಾಡಿದ್ದಾರೆ ಎಂಬುದು ನನಗೆ ಗೊತ್ತಿಲ್ಲ. ಸದರಿ ಸ್ವತ್ತನ್ನು ಖರೀದಿಸುವ ಸಲುವಾಗಿ ಸಾಲ ಪಡೆಯುವ ಕಾರಣ ಮಾತ್ರ ನನ್ನ ಹೆಸರನ್ನು ಸದರಿ ಸ್ವತ್ತಿಗೆ ಸಂಬಂಧಪಟ್ಟಂತೆ ದಾಖಲಿಸಲಾಗಿದ್ದು , ಸದರಿ ಸಾಲ ತೀರಿಹೋದ ನಂತರ ಸದರಿ ಸ್ವತ್ತಿನ ಮೇಲೆ ಇದ್ದ ನನ್ನ ಹಕ್ಕನ್ನು ಬಿಟ್ಟುಕೊಡಬೇಕು ಎಂದು ಸದರಿ ಸ್ವತ್ತನ್ನು ಖರೀದಿಸುವ ಸಮಯದಲ್ಲಿ ಶರತ್ತು ಆಗಿತ್ತು ಎಂದು ಹೇಳುವುದು ಸರಿಯಲ್ಲ. ಸದರಿ ಸ್ವತ್ತನ್ನು ಖರೀದಿಸಿದ ನಂತರ ಜಗದೀಶ ರೇಗೆರವರೇ ಸದರಿ ಸಾಲದ ಕಂತನ್ನು ತುಂಬುತ್ತಾ ಹೋದರು. ನಂತರ ಅವರಿಗೆ ಹಣಕಾಸಿನ ತೊಂದರೆಯಾದ ಕಾರಣ ಅವರು ಸಾಲ ಕಂತನ್ನು ಸರಿಯಾಗಿ ಕಟ್ಟಲಿಲ್ಲ ಎಂಬುದು ನನಗೆ ಗೊತ್ತಿಲ್ಲ. ನಂತರ ಕೆನರಾ ಬ್ಯಾಂಕಿನವರು ನನ್ನ ಮತ್ತು ಅವರ ವಿರುದ್ಧ ಸಾಲ ವಸೂಲಾತಿಗಾಗಿ ದಾವೆಯನ್ನು ಹೂಡಿದ್ದರು. ಸದರಿ ದಾವೆಯಲ್ಲಿ ನಾನು ವಕೀಲರ ಮೂಲಕ ಹಾಜರಾಗಿದ್ದು ಪ್ರತಿವಾದಪತ್ರವನ್ನು ಸಲ್ಲಿಸಿದ್ದೇನೆ. ಸದರಿ ಪ್ರತಿವಾದಪತ್ರ ಈಗ ನನಗೆ ತೋರಿಸಿದ ದಾಖಲೆಯಾಗಿದ್ದು ಅದನ್ನು ಸಾಕ್ಷಿಯು

ಗುರುತಿಸಿದ ಕಾರಣ ನಿಡಿ-10 ಎಂದು ಗುರುತಿಸಲಾಯಿತು. ಸದರಿ ಪ್ರತಿವಾದಪತ್ರದಲ್ಲಿ ನಾನು ಸಾಲಕ್ಕೆ ಸಂಬಂಧಪಟ್ಟಂತೆ ಮಾತ್ರ ಸಾಲದ ದಾಖಲೆಗಳಿಗೆ ಸಹಿ ಮಾಡಿದ್ದು , ಸದರಿ ಸಾಲಕ್ಕೆ ನಾನು ಬಾಧ್ಯಸ್ಥನಾಗಿರುವುದಿಲ್ಲ ಎಂದು ಕಾಣಿಸಲಾಗಿದೆ. ಜಗದೀಶ ರೇಗೆರವರು ಸದರಿ ಸಾಲಕ್ಕೆ ಸಂಬಂಧಪಟ್ಟಂತೆ ಸುಮಾರು 27 ಲಕ್ಷವನ್ನು ಬ್ಯಾಂಕಿಗೆ ಪಾವತಿ ಮಾಡಿದ್ದಾರೆ ಎಂಬುದು ನನಗೆ ಗೊತ್ತಿಲ್ಲ.

**ಮುಂದುವರೆದ ಪಾಟೀ ಸವಾಲುಃ ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

(ತೆರೆದ ನ್ಯಾ.ದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸರಿ ಅದೆ,

1 ನೇ ಹೆ ಹಿ ದಿ ನ್ಯಾ.ಹಾಗೂ ಸಿಜೆಎಂ,
ಧಾರವಾಡ.